||ಶ್ರೀ:||

..ಕರ್ಮಂದೀಶ್ವರ ಭಕ್ತಿ ಬಂಧನ ವಶಃ
ಪ್ರೀತೋಸ್ತು ಕೃಷ್ಣ ಪ್ರಭುಃ



...ಸದಯ ಧವಳ ಹಾಸಂ
ವಿಠ್ಠಲಂ ಚಿಂತಯಾಮಿ





ಆನಂದತೀರ್ಥ ವರದೇ ದಾನವಾರಣ್ಯ ಪಾವಕೇ।
ಜ್ಞಾನದಾಯಿನಿ ಸರ್ವೇಶೇ ಶ್ರೀನಿವಾಸೇಸ್ತುಮೇ ಮನಃ ॥



ರಮಾರಮಣ ಸಚ್ಚರಣ ಪಂಕಜೋದ್ಭವ ಸೌರಭಂ।
ಜ್ಞಾನಾಕ್ಷೈಃ ಲೇಲಿಹಾನಂ ತಂ ರಾಘವೇಂದ್ರಾಳಿಕಂ ಭಜೇ।



ಸಂಚರದ್ರಾಘವೇಂದ್ರಃ
ಶ್ರೀ ಮೂಲರಾಮಾರ್ಚನೇ ರತಃ।
ಸುಶಮೀಂದ್ರ ಯತೀಂದ್ರೋವ್ಯಾತ್
ಕಾರುಣ್ಯ ಕ್ಷೀರ ಸಾಗರಃ ॥



ಅಧುನಾ
ಪೀಠಾಧಿಪತಿಗಳಾದ
ಶ್ರೀ ಶ್ರೀ 1008
ಶ್ರೀ ಸುಯತೀಂದ್ರ ತೀರ್ಥರು

# ಆಹ್ವಾನ ಪತ್ರಿಕಾ

ಅಧೀನ ಚಿಂತಿಪುದಕ್ಕಿಂತ ! ಅಧಿಕ ಸಾಧನವಿಲ್ಲ.. ಜೈ ವಿಠ್ಠಲ



**|| ಭಗವತ್ಕಾರ್ಯ ಸಾಧಕಃ ಶ್ರೀ ಮುಖ್ಯ ಪ್ರಾಣಃ ||**

**ಶ್ರೀ ಹರಿವಾಯು ಗುರುಗಳನ್ನು ಸ್ಮರಿಸಿ, ಸ್ತುತಿಸಿ, ಭಕ್ತ್ಯಾ ಸಾಷ್ಟಾಂಗವೆರಗಿ, ಭಕ್ತರಲ್ಲಿ ಮಾಡುವ ವಿಜ್ಞಾಪನೆಗಳು.**

ಶ್ರೀ ಪುರಂದರ ವಿಠಲ ಸೇವಾ ಟ್ರಸ್ಟ್ ಪರವಾಗಿ ಆದವಾನಿ ಮತ್ತು ಮಂತ್ರಾಲಯ ಕ್ಷೇತ್ರಗಳ ಮಧ್ಯೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಓಂ ನಗರ್ ಸನಿಹದಲ್ಲಿ, ಸಜ್ಜನರ ಆಧ್ಯಾತ್ಮಿಕ ಸಾಧನೆಯನ್ನುದ್ದೇಶಿಸಿ ಹನ್ನೊಂದು ವರೆ ಎಕರೆ ಸುವಿಶಾಲ, ನೈಸರ್ಗಿಕ, ಪರಿಶುದ್ಧ ಹಾಗೂ ಪವಿತ್ರ ವಾತಾವರಣಯುಕ್ತ ಪ್ರದೇಶದಲ್ಲಿ ಇರುವ ಶ್ರೀ ಪುರಂದರಾಶ್ರಮದಲ್ಲಿ ಇದೇ ವಿಕೃತಿನಾಮ ಸಂವತ್ಸರ ನಿಜ ವೈಶಾಖ ಬಹುಳ ತ್ರಯೋದಶಿ ಗುರುವಾರ ದಿನಾಂಕ 10-06-2010 ಬೆಳಿಗ್ಗೆ ಗಂ॥8-01 ರಿಂದ 10-00ರ॥ ವರೆಗು ಸಲ್ಲುವ ಕರ್ಕ ಲಗ್ನ ಶುಭ ಮುಹೂರ್ತದಲ್ಲಿ ಭೂವೈಕುಂಠಪತಿ ಕಾಂಚನ ಬ್ರಹ್ಮನೆಂದೆನಿಸಿದ ಶ್ರೀ ಶ್ರೀನಿವಾಸದೇವರು "ಪ್ರಸನ್ನ ಶ್ರೀನಿವಾಸನಾಗಿ", ಭಕ್ತನ ಭಕ್ತಿಗೆ ಮೆಚ್ಚಿ ನಿರುತ ಇಟ್ಟಿಗೆ ಮೇಲೆನಿಂತ ನಾದಬ್ರಹ್ಮ ಪಂಢರಪುರದ "ಶ್ರೀಪಾಂಡುರಂಗ ವಿಠಲನು" "ಅನುಗ್ರಹ ವಿಠಲನಾಗಿ", ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಕರಕಮಲಗಳಿಂದ ಉಡುಪಿಯಲ್ಲಿ ನೆಲೆನಿಂತ ಮಂಥಾನಪಾಶಧರ ಅನ್ನಬ್ರಹ್ಮ ಶ್ರೀ ಕೃಷ್ಣನು "ಸರ್ವೇಷ್ಟಪ್ರದ ಕೃಷ್ಣನಾಗಿ", ಹರಿದಾಸವರ್ಯರು ತಮ್ಮ ಅನುಭವದಿಂದ ಕಂಡಂತೆ ಭಕ್ತರ ಅನಿಷ್ಟ ನಿವಾರಣೆ ಇಷ್ಟ ಪ್ರಾಪಕನಾಗಿ ಶ್ರೀ ರಾಘವೇಂದ್ರ ಗುರುವರ್ಯರ ಅಂತರ್ಯಾಮಿಯಾಗಿ ಸದಾಸಂಸಿದ್ಧನಾದ ಚಕ್ರಧರ ನಾರಾಯಣನು "ಅಭಯಪ್ರದ ನಾರಾಯಣನಾಗಿ", ಭಗವತ್ ಕಾರ್ಯಸಾಧನೆಯಲ್ಲಿ ಪ್ರಥಮಾಂಗರೆನಿಸಿದ ಭಾರತೀರಮಣ ಶ್ರೀ ಮುಖ್ಯಪ್ರಾಣದೇವರು "ಅವತಾರ-ತ್ರಯೋಪೇತರಾಗಿ", ಕಲಿಯುಗದಲ್ಲಿ ಕಾಮಿತಾರ್ಥಗಳನ್ನು ಕಾಮಧೇನುವಿನ ಸೀಮಾಮೀರಿ ಕೊಡುವ ಮಹರಾಜರೆಂದೇ ಖ್ಯಾತರಾದ ಶ್ರೀ ರಾಘವೇಂದ್ರ ಗುರು ಸಾರ್ವಭೌಮರು "ಮೃತ್ತಿಕಾ ಬೃಂದಾವನ ರೂಪಿಗಳಾಗಿ", 'ನಾರಾಯಣನೆಂಬ ನಾಮದ ಬೀಜವ ಧರೆಯೋಳು ಬಿತ್ತಿದ' ಭಕ್ತಿಯೋಗಿ ನಾರದಾಂಶ ಸಂಭೂತ ಶ್ರೀ ಪುರಂದರ ದಾಸರು - "ದಾಸಧರ್ಮ ಪ್ರಚಾರದ ಅಧ್ವರ್ಯುಗಳಾಗಿ" ಶ್ರೀ ಪುರಂದರಾಶ್ರಮದಲ್ಲಿ ತಮ್ಮ ಅನುಗ್ರಹೋನ್ಮುಖ ದಿವ್ಯಸನ್ನಿಧಾನದಿಂದ ಅರ್ಚಾಮೂರ್ತಿಗಳಲ್ಲಿ ನೆಲೆನಿಂತು ಭಕ್ತರ ಇಷ್ಟಾರ್ಥಗಳನ್ನು ಪೂರ್ಣಗೊಳಿಸಲಿದ್ದಾರೆ.

ಪೂರ್ವೋಕ್ತ ಪ್ರತಿಷ್ಠಾಪನಾಖ್ಯ ಮಂಗಳಮಯ ಮಹತ್ಕಾರ್ಯವು ಹಂಸನಾಮಕ ಪರಮಾತ್ಮನ ಸಾಕ್ಷಾತ್ ಪರಂಪರೆಯಾದ ಶ್ರೀ ಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಮಠದ ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾಗಿ, ಮಂತ್ರಾಲಯದ ಮಹಾಶಿಲ್ಪಿಗಳೆಂದೇ ಯಶೋವಿಶಾಲಿಗಳಾಗಿ ಮೆರೆದ ಶ್ರೀಶ್ರೀ 1008 ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ, "ನಡೆದಾಡುವ ಗುರುರಾಜ ರೆಂದೇ" ಜನ ಜನಿತರಾಗಿ ಖ್ಯಾತರಾದ ಶ್ರೀಶ್ರೀ 1008 ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ವರ ಕುಮಾರಕರಾದ ಶ್ರೀಶ್ರೀ 1008 ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಗಳಿಂದ ನೆರವೇರುವಂತೆ ಶ್ರೀ ಹರಿ-ವಾಯುಗಳು, ಗುರುಗಳ ದ್ವಾರಾ ಪ್ರಸನ್ನರಾಗಿ ಅನುಗ್ರಹಿಸಿರುವುದು ನಮ್ಮ ಮಹದ್ಭಾಗ್ಯವೇ ಸರಿ.

ಮನೋನಯನಾನಂದಕರವು, ಬುದ್ಧಿ ವಿಕಾಸ, ಉಲ್ಲಾಸಕಾರಕವು, ಮಹಾಪುಣ್ಯಪ್ರದವೂ, ಮೇಲಾಗಿ ಶ್ರೀ ಹರಿ-ವಾಯು ಗುರುಗಳ ಅತ್ಯಂತ ತೋಷಕಾರಕವೂ ಆದ ಈ ಮಹಾ ಮಹೋತ್ಸವದಲ್ಲಿ ಭಾಗವಹಿಸುವುದು ನಿಮ್ಮ ಪಾಲಿನ ದೊಡ್ಡ ಭಾಗ್ಯವೆಂದೇ ಭಾವಿಸಿ, ಆಸಕ್ತರಾದ ನಿಮ್ಮ ಪರಿವಾರ, ಬಂಧು-ಮಿತ್ರಾದಿಗಳೊಡನೆ ಪ್ರತಿಷ್ಠಾಪನಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬಿಚ್ಚು ಮನಸ್ಸಿನಿಂದ ಸೇವೆ ಸಲ್ಲಿಸಿ ಕೃತಾರ್ಥರಾಗಲು ಈ ಮೂಲಕ ನಿಮಗೆ ಸಾದರ ಆಹ್ವಾನ ನೀಡಲಾಗಿದೆ.

ಬನ್ನಿ! ಬನ್ನಿ!! ತಪ್ಪದೇ ಬನ್ನಿ!!! ಕಾರ್ಯಕ್ರಮಗಳ ವಿವರದೊಂದಿಗೆ ಸೇವಾ ಪಟ್ಟಿಯನ್ನು ತಮ್ಮ ಅವಗಾಹನೆಗಾಗಿ ಇದರೊಂದಿಗೆ ಕಳುಹಿಸಲಾಗಿದೆ.

ಇಂತು ವಿಜ್ಞಾಪಿಸುವವರು
**ಶ್ರೀ ಪುರಂದರ ವಿಠಲ ಸೇವಾ ಟ್ರಸ್ಟ್** ಪರವಾಗಿ

**ಶ್ರೀ ಹರಿನಾರಾಯಣ ವಿಠಲ ದಾಸರು**
(ಹೆಚ್. ಹನುಮಂತರಾವ್)
**ಅಧ್ಯಕ್ಷರು**
ಮತ್ತು ಸಮಸ್ತ ಧರ್ಮದರ್ಶಿಗಳು.

ವಿಳಾಸ : ______________________

**ಶ್ರೀ ಪುರಂದರಾಶ್ರಮ,** ಓಂ ನಗರ್ ಪೋಸ್ಟ್ - 518 349, ಆದವಾನಿ ತಾ॥ ಕರ್ನೂಲ್ ಜಿಲ್ಲೆ, ಆಂ.ಪ್ರ.
ಮೊಬೈಲ್ :+91 9394017134, +91 9391017137, +91 9342418284, +91 9481389119, +91 9342291801, +91 9533274670

# ಶ್ರೀ ಪುರಂದರ ಆಶ್ರಮದಲ್ಲಿ ಪ್ರತಿಷ್ಠಾಪನಾ ಮಹೋತ್ಸವ ಸಂದರ್ಭದಲ್ಲಿ ಭಕ್ತರಿಗೆ ಒದಗಿಸಲಾಗಿರುವ ಸೇವಾವಕಾಶಗಳು



## ಪ್ರತಿಷ್ಠಾಪನಾಂಗ ಪೂರ್ಣ ಸೇವಾ

| | | |
|---|---|---|
| 1. | ದಿ.: 06-06-2010 ರಂದು ಹೋಮ ಮತ್ತು ಅನ್ನದಾನ ಸೇವಾ | - ರೂ. 25,000/- |
| 2. | ದಿ.: 07-06-2010 ರಂದು ಹೋಮ ಮತ್ತು ಅನ್ನದಾನ ಸೇವಾ | - ರೂ. 30,000/- |
| 3. | ದಿ.: 08-06-2010 (ಏಕಾದಶಿ) ರಂದು ಸಚ್ಛಾಸ್ತ್ರ ಪಾರಾಯಣ, ಮಂತ್ರ ಇತ್ಯಾದಿ | - ರೂ. 40,000/- |
| 4. | ದಿ. : 09-06-2010 (ದ್ವಾದಶಿ) ರಂದು ಹೋಮ ಮತ್ತು ಅನ್ನದಾನ ಸೇವಾ | - ರೂ. 50,000/- |
| 5. | ದಿ. : 10-06-2010 ರಂದು ಪ್ರತಿಷ್ಠಾಪನಾ ಹೋಮ ಮತ್ತು ಅನ್ನದಾನ ಸೇವಾ | - ರೂ. 2,20,000/- |
| 6. | ದಿ. : 11-06-2010 ರಂದು ಶ್ರೀನಿವಾಸ ಕಲ್ಯಾಣ ಮತ್ತು ಅನ್ನದಾನ ಸೇವಾ | - ರೂ. 50,000/- |
| 7. | ದಿ. : 12-06-2010 ರಂದು ಹೋಮ ಮತ್ತು ಅನ್ನದಾನ ಸೇವಾ | - ರೂ. 1,00,000/- |
| 8. | ಶ್ರೀನಿವಾಸ ಕಲ್ಯಾಣ ಸೇವಾ (ಒಬ್ಬ ಸೇವಾ ಕರ್ತರಿಗೆ) | - ರೂ. 500/- |
| 9. | ಕಲಶಾಭಿಷೇಕ (ಒಂದು ಕಲಶಕ್ಕೆ) | - ರೂ. 300/- |
| 10. | ಪ್ರತಿಷ್ಠಾಪನಾಂಗ ಹೋಮ ಸೇವಾ (ಒಬ್ಬ ಸೇವಾ ಕರ್ತರಿಗೆ) | - ರೂ. 1,000/- |
| 11. | ಹೋಮ ಒಂದಕ್ಕೆ | - ರೂ. 2,000/- |
| 12. | ಹೋಮ ದ್ರವ್ಯ ಸೇವಾ | - ರೂ. 300/- |
| 13. | ಹೋಮ ಸಂಕಲ್ಪ ಸೇವಾ | - ರೂ. 200/- |
| 14. | ಪ್ರತಿಷ್ಠಾಪನಾದಿನ (ದಿ.10-6-2010) ದಂದು ಪುಷ್ಪಾಲಂಕಾರ ಪೂರ್ಣಸೇವಾ | - ರೂ. 10,000/- |
| 15. | ದಿನ ನಿತ್ಯ (ದಿ|| 6-6-2010 ರಿಂದ 7-6-2010 ವರೆಗೆ ಪುಷ್ಪಾಲಂಕಾರ ಸೇವಾ) | - ರೂ. 1,000/- |
| 16. | ದಿನ ನಿತ್ಯ ಪುಷ್ಪಾಲಂಕಾರ ಸೇವಾ (ದಿ|| 9-6-2010 ರಿಂದ 12-6-2010 ವರೆಗೆ) | - ರೂ. 2,000/- |
| 17. | ವೇದ ಪಾರಾಯಣ ಪೂರ್ಣ ಸೇವಾ | - ರೂ. 2,500/- |
| 18. | ಶ್ರೀ ಮದ್ಭಾಗವತ ಪೂರ್ಣ ಪಾರಾಯಣ ಸೇವಾ | - ರೂ. 2,000/- |
| 19. | ಶ್ರೀ ಮದ್ಭಾಗವತ ಸಾರೋದ್ಧಾರ ಪಾರಾಯಣ ಸೇವಾ | - ರೂ. 1,500/- |
| 20. | ಶ್ರೀ ಮಧ್ವವಿಜಯ, ಶ್ರೀ ಹರಿ ವಾಯುಸ್ತುತಿ, ಶ್ರೀ ಮದ್ಹರಿಕಥಾಮೃತ ಸಾರ ಸುಳಾದಿ ಇತ್ಯಾದಿ ಸಚ್ಛಾಸ್ತ್ರ ಪಾರಾಯಣ ಸೇವಾ | - ರೂ. 1,000/- |
| 21. | ಪಂಚಾಮೃತಾಭಿಷೇಕ ಸೇವಾ | - ರೂ. 100/- |
| 22. | ಹಸ್ತೋದಕ ಸೇವಾ | - ರೂ. 200/- |
| 23. | ದೀಪೋತ್ಸವ ಸೇವಾ | - ರೂ. 100/- |
| 24. | ತುಲಸೀ ಅರ್ಚನಾ | - ರೂ. 100/- |
| 25. | ಮಂಗಳಾರತಿ | - ರೂ. 10/- |
| 25. | ದಿ.: 11-6-2010 ರಂದು ದುರ್ಗಾ ಹೋಮ | - ರೂ. 2,000/- |
| 27. | ದಿ.: 12-6-2010 ರಂದು ವಿಷ್ಣುಸಹಸ್ರನಾಮ ಹೋಮ ಮತ್ತು ಸತ್ಯನಾರಾಯಣ ಪೂಜೆ | - ರೂ. 2,000/- |
| 28. | ಸತ್ಯನಾರಾಯಣ ಪೂಜೆ ಸೇವಾ | - ರೂ. 200/- |

ಸೇವಾ ಹಣ ಸಲ್ಲಿಸುವವರು

**'SRI PURANDARA VITTALA SEVA TRUST'** ಹೆಸರಿನಲ್ಲಿ ಚೆಕ್/ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸ ಬಹುದು. ನಮ್ಮ ಟ್ರಸ್ಟ್ Account ಕೆನರಾ ಬ್ಯಾಂಕ್, ಅದೋನಿ ಬ್ರಾಂಚ್ ನಲ್ಲಿರುವುದು

**(C/A No. 1713 IFSC CODE : 0000601 CNRB)**

॥ ದಾಸರೆಂದರೆ ಪುರಂದರ ದಾಸರಯ್ಯ ॥

# ಶ್ರೀ ಪುರಂದರ ಆಶ್ರಮದಲ್ಲಿ ಪ್ರತಿಷ್ಠಾಪನಾಂಗತ್ವೇನ ದಿನನಿತ್ಯ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ.

**1. ದಿನಾಂಕ : 06-06-2010 ನವಮಿ, ಆದಿತ್ಯವಾರ**

ಸಾಯಂಕಾಲ : ದೇವತಾ ಪ್ರಾರ್ಥನಾ, ಮೃತ್ತಿಕಾ ಸಂಗ್ರಹಣ, ಅಂಕುರಾರ್ಪಣ ಇತ್ಯಾದಿ.

**2. ದಿನಾಂಕ : 07-06-2010 ದಶಮಿ, ಸೋಮವಾರ**

ಬೆಳಿಗ್ಗೆ & ಸಾಯಂಕಾಲ : ಗೋಪೂಜ, ಗಂಗಾ ಪೂಜ, ಪುಣ್ಯಾಹವಾಚನ, ಕಲಶ ಸ್ಥಾಪನಾ, ಋತ್ವಿಕ್ ವರಣ ವಾಸ್ತು, ನವಗ್ರಹ, ರಕ್ಷೋಘ್ನ, ಶಾಂತಿ ಹೋಮ, ಮೃದಧಿವಾಸಾದಿಗಳು, ವೇದಾದಿ ಸಚ್ಛಾಸ್ತ್ರ ಪಾರಾಯಣ, ಶ್ರೀ ಮದ್ಧರಿಕಥಾಮೃತಾಸಾರ, ಸುಳಾದಿ ಇತ್ಯಾದಿ ಪಾರಾಯಣ, ಅಷ್ಟಾವಧಾನ ಸೇವಾ, ಮಹಾಮಂಗಳಾರತಿ

**3. ದಿನಾಂಕ : 08-06-2010 ಏಕಾದಶಿ, ಮಂಗಳವಾರ**

ಬೆಳಿಗ್ಗೆ & ಸಾಯಂಕಾಲ : ವೇದಾದಿ ಸಚ್ಛಾಸ್ತ್ರ ಪಾರಾಯಣ, ಶ್ರೀಮದ್ಭಾಗವತ, ಶ್ರೀಮದ್ಭಾಗವತ ಸಾರೋದ್ಧಾರ, ಪವಮಾನ, ಶ್ರೀ ಮಧ್ವವಿಜಯ, ಶ್ರೀ ಹರಿವಾಯುಸ್ತುತಿ, ಶ್ರೀ ರಾಯರ ಅಷ್ಟೋತ್ತರ, ಶ್ರೀ ಮದ್ಧರಿಕಥಾಮೃತಾಸಾರ, ಸುಳಾದಿ, ತತ್ತ್ವಸುವ್ವಾಲೆ ಇತ್ಯಾದಿ ಪಾರಾಯಣ. ರಾತ್ರಿ ಭಜನ ಮತ್ತು ಜಾಗರೊತ್ಸವ.

**4. ದಿನಾಂಕ : 09-06-2010 ದ್ವಾದಶಿ, ಬುಧವಾರ**

ಬೆಳಿಗ್ಗೆ & ಸಾಯಂಕಾಲ : ಬ್ರಾಹ್ಮಿ ಮುಹೂರ್ತ(4:30)ಕಾರ್ಯಕ್ರಮ ಆರಂಭ. ಮೂರ್ತಿಗಳಿಗೆ ಸಂಬಂಧಿಸಿದ ಪ್ರತಿಷ್ಠಾಪನಾಂಗ ಹೋಮಗಳು, ಪುಷ್ಪಾಧಿವಾಸ, ಶಯನಾಧಿವಾಸ ಇತ್ಯಾದಿ ಸಚ್ಛಾಸ್ತ್ರ ಪಾರಾಯಣ.

**5. ದಿನಾಂಕ : 10-6-2010 ತ್ರಯೋದಶಿ, ಗುರುವಾರ**

ಬೆಳಿಗ್ಗೆ & ಸಾಯಂಕಾಲ : ಉ॥ಗಂ॥ 7:00 ಗೆ ನೇತ್ರೋನ್ಮೀಲನ, ಇತ್ಯಾದಿ. ಶ್ರೀ ಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ ಶ್ರೀ ಮದ್ರಾಘವೇಂದ್ರ ಸ್ವಾಮಿಗಳವರ ಮಠಾಧೀಶರಾದ ಶ್ರೀಶ್ರೀ 1008 ಶ್ರೀ ಸುಯತೀಂದ್ರ ತೀರ್ಥ ಶ್ರೀಪಾದಂಗಳವರ ಕರಕಮಲಗಳಿಂದ ಪ್ರತಿಷ್ಠಾಪನಾ, ಕಲಶಾಭಿಷೇಕ, ಬ್ರಹ್ಮಕುಂಭಾಭಿಷೇಕ, ಪಂಚಾಮೃತಿಭೇಷಕ ಮಹಾ ಸಂಸ್ಥಾನ ದೇವರ ಪೂಜಾ - ತೀರ್ಥ ಪ್ರಸಾದ, ಫಲಮಂತ್ರಾಕ್ಷತೆ ವಿತರಣೆ.

**ವಿಶೇಷ ಸೂಚನೆ :**

1. ಮೇಲೆ ಕಾಣಿಸಿದ ಕಾರ್ಯಕ್ರಮಗಳ ಜೊತೆಗೆ ದಿನಾಂಕ 07-06-2010 ರಿಂದ 12-6-2010 ರ ವರೆಗೆ ಜ್ಞಾನಸತ್ರ ವಿರುವ ಪ್ರಯುಕ್ತ ಪ್ರತಿನಿತ್ಯವೂ ವಿದ್ವಾಂಸರಿಂದ ಉಪನ್ಯಾಸ, ಹರಿಕಥೆ, ಸಂಗೀತ (ದಾಸವಾಣಿ), ನೃತ್ಯ, ರೂಪಕ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ದಾಸ ಸಾಹಿತ್ಯ ಪ್ರಾಜೆಕ್ಟ್ ಟಿ.ಟಿ.ಡಿ. ಇವರ ಸಂಯೋಜನೆ ಹಾಗೂ ಸಹಕಾರದಿಂದ ಮನೋನಯನಾನಂದ ಕರವಾಗಿ ಜರುಗುಲಿವೆ. ದಿನಾಂಕ 11-06-2010 ರಂದು ಬೆಳಿಗ್ಗೆ ಶ್ರೀ ಖಗವರಧ್ವಜ ದಾಸರು ಹಾಗೂ ಶ್ರೀ ರಘೂತ್ತಮ ಆಚಾರ್ಯರಿಂದ ಶ್ರೀನಿವಾಸ ಕಲ್ಯಾಣವು ನೆರವೇರಲಿದೆ.
2. ಭಜನಾ ಮಂಡಲಿಗಳ ಸದಸ್ಯರೊಂದಿಗೆ ಸಕಲ ಭಗವದ್ಭಕ್ತರು ಸಕ್ರಿಯವಾಗಿ ಈ ಮಹಾ ಮಹೋತ್ಸವದಲ್ಲಿ ಪಾಲ್ಗೊಂಡು ಯಥಾಶಕ್ತಿ ತಮ್ಮ ಪಾಲಿನ ಸೇವೆ ಸಲ್ಲಿಸಿ ಶ್ರೀ ಹರಿ ವಾಯು ಗುರುಗಳ ಪರಮಾನುಗ್ರಹಕ್ಕೆ ಪಾತ್ರರಾಗಲು ವಿಜ್ಞಾಪಿಸಲಾಗಿದೆ.



ಶ್ರೀ ಗುರುಗೋವಿಂದ ದಾಸರು

**“ಭಿಕ್ಷೆಯ ನೀಡಿರಿ ಜೋಳಿಗೆಗೆ, ಅಕ್ಷಯ ವಾಗುವುದು ನಿಮಗೆ”**

## ಶ್ರೀ ಪುರಂದರ ವಿಠಲ ಸೇವಾ ಟ್ರಸ್ಟ್

**ಅಧ್ಯಕ್ಷರು & ಸಕಲಧರ್ಮದರ್ಶಿಗಳು**



ಶ್ರೀ ಹರಿನಾರಾಯಣ ದಾಸರು